# ವಿಜಯಶ್ರೀಯವರ ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆ

ಮಹಾಲಿಂಗಪ್ರಭು

ಕನ್ನಡ ಸಹಾಯಕ ಅಧ್ಯಾಪಕರು, ದಯಾನಂದ ಸಾಗರ್ ಬಿಸಿನೆಸ್ ಅಕಾಡೆಮಿ,

ಉದಯಪುರ, ಬೆಂಗಳೂರು.

DOI: https://doi.org/10.5281/zenodo.17773551

## ABSTRACT:

ಸಮಾಜ ಎಂಬ ಪರಿಕಲ್ಪನೆ ಮಾನವ ಪ್ರಾರಂಭ ಹಂತದಿಂದ ನಾಗರೀಕನಾಗುತ್ತಾ ಬೆಳೆದುಬಂದಂತೆ ಒಂದೆಡೆ ನೆಲೆಸುವ, ಕೂಡಿ ಬಾಳುವ ಹಂತದಲ್ಲಿ ಸಮಾಜ ಸಮುದಾಯ ಪರಿಕಲ್ಪನೆಗಳು ಬೆಳೆಯಲಾರಂಭಿಸಿದವು. ಧರ್ಮ, ಜಾತಿಗಳು ಹುಟ್ಟಿಕೊಂಡವು. ಸಾಮಾಜಿಕ ಸಂವೇದನೆ ಮತ್ತು ಸಾಹಿತ್ಯ ಸಂವೇದನೆಗಳೆರಡೂ ಬೇರೆ ಬೇರೆಯಲ್ಲ, ಅವು ಪರಸ್ಪರ ಸಾಹಚರ್ಯಭಾವ ಹೊಂದಿದೆಯೆಂಬ ಅಭಿಪ್ರಾಯ ಪಡುತ್ತಾರೆ.

'ರವಿ ಕಾಣದ್ದನ್ನು ಕವಿ ಕಂಡ' ಎಂಬಂತೆ ಸಮಾಜದ ಆಗುಹೋಗುಗಳನ್ನು ಲೇಖಕಿ ತಮ್ಮ ಲೇಖನಿಯಲ್ಲಿ ಮೂಡಿಸಿದ್ದಾರೆ. "ಮನುಷ್ಯ ಮನುಷ್ಯ ಸಂಬಂಧಗಳು ಅವು ಏಕಕಾಲಕ್ಕೆ ಕುಟುಂಬ ಸಂಬಂಧಗಳು ಹೌದು, ಸಾಮಾಜಿಕ ಸಂಬಂಧಗಳು ಹೌದು" ಎಂಬಂತೆ ಮಾನವ ಕುಟುಂಬ ಜೀವಿಯೂ ಹೌದು, ಸಾಮಾಜಿಕ ಜೀವಿಯೂ ಹೌದು. ಈ ಹಿನ್ನೆಲೆಯಲ್ಲಿ ಸಾಮರಸ್ಯ ಬಾಂಧವ್ಯಗಳು ಸಮಾಜದಲ್ಲಿ ಬಹಳ ಮಹತ್ವವೆನಿಸುತ್ತದೆ.

**"ಪಡುವ ಕಡಲ ಹೊನ್ನಹೆಣ್ಣು**
**ನನ್ನ ಜೀವದುಸಿರು ಕಣ್ಣು**
**ನಲಿಸಿ ಕಲಿಸಿ ಮನವನೊಲಿಸಿ**
**ಕುಣಿಸಿರುವಳು"**

ಎಂದು ಬಿ.ಎಂ.ಶ್ರೀ.ಯವರ 'ಇಂಗ್ಲೀಷ್ ಗೀತೆಗಳು' ಸಂಕಲನದಲ್ಲಿ ಕಾಣಿಕೆ ಕವನದಲ್ಲಿ ಹೇಳುವ ಮಾತು ಪಾಶ್ಚಿಮಾತ್ಯ ಸಮಾಜವನ್ನು ಕೂಡಾ ತನ್ನದಾಗಿಸಿಕೊಂಡ ಹೃದಯ ವೈಶಾಲ್ಯತೆಯನ್ನು ಕಾಣಬಹುದಾಗಿದೆ.

ವಿಜಯಶ್ರೀಯವರು ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಹಲವಾರು ಸಮಾಜಮುಖಿ ಕಾರ್ಯಗಳನ್ನು ಕೈಗೊಂಡವರು. ಇವರ ಕಾದಂಬರಿಗಳಲ್ಲಿ ಸಮಾಜದ ವಿವಿಧ ಮುಖಗಳನ್ನು ಅತ್ಯಂತ ನೈಜವಾಗಿ ಬಿಂಬಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಸಮಾಜದ ಮೌಢ್ಯ, ಮೂಢನಂಬಿಕೆಗಳು, ನಿಮ್ನ-ಮೇಲ್ವರ್ಗದ ಸಮಸ್ಯೆಗಳ ಚಿತ್ರಣ, ಬಡತನ, ನಿರುದ್ಯೋಗದ ಪರಿಕಲ್ಪನೆ, ವೇಶ್ಯಾ ಸಮಸ್ಯೆ, ಮಹಿಳೆ ಮೇಲಿನ ಅತ್ಯಾಚಾರ, ಬಾಲ್ಯವಿವಾಹ, ವಿಧವಾ ವಿವಾಹಗಳ ಬಗೆಗಿನ ಪರಿಕಲ್ಪನೆಗಳ ಬಗ್ಗೆ ಬೆಳಕು ಚೆಲ್ಲಲಾಗಿವೆ. ಸಾಮಾಜಿಕ ಪ್ರಜ್ಞೆಯುಳ್ಳ ಹಲವು ಕಾದಂಬರಿಗಳು ಸಾಮಾಜಿಕ

ನೆಲೆಯಲ್ಲಿ ಅಧ್ಯಯನಕ್ಕೆ ಯೋಗ್ಯವಾಗಿವೆ.

ಈ ರೀತಿಯ ಸರಳತೆ, ನೈಜ ಸನ್ನಿವೇಶಗಳ ಚಿತ್ರಣ ವಿಜಯಶ್ರೀಯವರ ಕಾದಂಬರಿಗಳು ಓದುಗನನ್ನು ತಲುಪಲು ಕಾರಣವಾಗಿದೆ.

**KEYWORDS:**

ಅತ್ಯಾಚಾರ, ಬಾಲ್ಯವಿವಾಹ, ಮೂಢನಂಬಿಕೆಗಳು, ಅಂಧಾನುಕರಣೆ, ಕೊಳ್ಳಿದೆವ್ವ, ರೆಡ್‌ಲೈಟ್ ಏರಿಯಾ, ಕಾಮಾತುರಾಣಾಂ ನ ಭಯಂ ನ ಲಜ್ಜಾ.

**ಬಡತನ ಮತ್ತು ಮೂಢನಂಬಿಕೆಗಳ ಪರಿಕಲ್ಪನೆ:**

ನಂಬಿಕೆ ಹಾಗೂ ಮೂಢನಂಬಿಕೆಗಳು ಸಮಾಜದಲ್ಲಿ ಮಿಳಿತಗೊಂಡಿದೆ. ಅಂಧಾನುಕರಣೆ, ವೈಜ್ಞಾನಿಕ ತಳಹದಿಯಿಂದ ಕೂಡಿರದ ಮೂಢನಂಬಿಕೆಗಳು ಸಮಾಜದ ಆರೋಗ್ಯವನ್ನು ಕೆಡವುತ್ತಿದೆ. ಯಾವ ನಂಬಿಕೆಗಳಲ್ಲಿ ಮೌಢ್ಯತೆ ತುಂಬಿರುವುದೋ ಅದನ್ನು ಮೂಢನಂಬಿಕೆಗಳೆಂದು ಕರೆಯಬಹುದಾಗಿದೆ. ಇದು ಎಲ್ಲಾ ದೇಶ, ಜನಾಂಗಗಳಲ್ಲೂ ಕಂಡುಬರುತ್ತದೆ. ಕೆಲವೊಮ್ಮೆ ಮಾನವನನ್ನು ಅಂಕೆಯಿಡಲು ಹುಟ್ಟಿಕೊಂಡ ನಂಬಿಕೆಗಳೇ ಮೌಢ್ಯತೆಯಿಂದ ಮೂಢನಂಬಿಕೆಗಳಾಗಿ ಬದಲಾಗುತ್ತವೆ.

ಭಾರತ ದೇಶದಲ್ಲಿ ಬಡತನ ಮತ್ತು ಮೂಢನಂಬಿಕೆಗಳು ಪರಸ್ಪರ ಹೆಣೆದುಕೊಂಡಿದೆ. ಇದಕ್ಕೆ ಕಾರಣ ಅಜ್ಞಾನ ಹಾಗೂ ಅನಕ್ಷರತೆ. ಅಜ್ಞಾನ ಎಲ್ಲಿ ತಾಂಡವವಾಡುತ್ತಿರುತ್ತದೆಯೋ ಅಲ್ಲಿ ವಿಜ್ಞಾನದ ಮೂಲಭೂತ ತತ್ವಗಳು ಮರೆಯಾಗುತ್ತಿವೆ. ಒಂದು ಸಮಾಜ ಸುಸಂಸ್ಕೃತವಾಗಿಯೂ, ಶಿಸ್ತುಬದ್ಧವಾಗಿಯೂ ರೂಪುಗೊಳ್ಳಬೇಕಾದರೆ ಜನಸಾಮಾನ್ಯರಲ್ಲಿ ಮೊದಲು ವೈಜ್ಞಾನಿಕ ಮನೋಭಾವವನ್ನು ಬೆಳೆಸಬೇಕು – ವೈಜ್ಞಾನಿಕ ಮನೋಭಾವ ಬರೀ ವಿಜ್ಞಾನ ಕಲಿತವರಿಗಲ್ಲ. ಪ್ರತಿಯೊಬ್ಬ ವ್ಯಕ್ತಿಯ ಅರಿವಿಗೆ ಸರಿ–ತಪ್ಪುಗಳ ಪರಿಕಲ್ಪನೆಯನ್ನು ಮೂಡಿಸಬೇಕಾಗಿದೆ. ಸಮಾಜದಲ್ಲಿ ಮಾನಸಿಕ ಆರೋಗ್ಯ ಕೂಡಾ ಅಗತ್ಯ, ವಿಕ್ಷಿಪ್ತ ಮನಸ್ಸು, ನಂಬಿಕೆಗಳು ಸಮಾಜದ ಸ್ವಾಸ್ಥ್ಯವನ್ನು ಕೆಡವುತ್ತವೆ. ದೇವದಾಸಿ ಪದ್ಧತಿ, ಬಸವಿ ಬಿಡುವ ಪದ್ಧತಿ, ದೆವ್ವ, ಭೂತ ಪರಿಕಲ್ಪನೆಗಳು, ಬಾಣಂತಿ ಸನ್ನಿ ಇತ್ಯಾದಿ ಪರಿಕಲ್ಪನೆಗಳು ದೇವರ ಹೆಸರಿನಲ್ಲಿ ನಡೆದುಕೊಂಡು ಬರುತ್ತಿವೆ. ದೇವರಲ್ಲಿನ ನಂಬಿಕೆ ಮೂಢನಂಬಿಕೆ ಅಲ್ಲ, ಆದರೆ ದೇವರ ಹೆಸರಿನಲ್ಲಿ ಬಲಿಕೊಡುವುದು, ವಾಮಾಚಾರ, ಮಾಟಮಂತ್ರ ಮುಂತಾದ ಅಮಾನವೀಯ ಆಚರಣೆಗಳಿವೆ. ಇವುಗಳಿಗೆ ಸುಲಭವಾಗಿ ಬಲಿಯಾಗುತ್ತಿರುವವರು 'ಅನಕ್ಷರಸ್ಥ ಬಡಜನರೇ' ಆಗಿದ್ದಾರೆ. ಸುಲಭವಾಗಿ ಮುಗ್ಧ ಬಡಜನರನ್ನು ಭಯಭೀತಿಗೊಳಿಸಿ ಸ್ವಾರ್ಥಸಾಧನೆ ಮಾಡುವ ಪಟ್ಟಭದ್ರ ಹಿತಾಸಕ್ತಿಗಳನ್ನು ಸಮಾಜದಲ್ಲಿ ಕಾಣಬಹುದಾಗಿದೆ.

ಅವ್ಯಕ್ತದಾಚೆ: ಕಾದಂಬರಿಯಲ್ಲಿ ಸದಾನಂದನ ಗೆಳೆಯ ಶಂಕರನ ತುಂಬು ಸಂಸಾರದಲ್ಲಿ ಘಟಿಸುವ ಘಟನೆಗಳ ಚಿತ್ರಣವಿದೆ. ರಮೆ ಶಂಕರನ ತಂಗಿ ಕಾಲಿನ ಸ್ವಾಧೀನವನ್ನು ಕಳೆದುಕೊಳ್ಳುತ್ತಾಳೆ. ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಫಲಕಾರಿಯಾಗದೆ ಮಾಟಮಂತ್ರಕ್ಕೆ ಮಾರು ಹೋಗುತ್ತಾರೆ. ಇಲ್ಲಿ ಶಂಕರನ ದುರ್ಬಲ ಮನಸ್ಥಿತಿ, ಬಡತನ ತಂಗಿಗೆ ಹೆಚ್ಚಿನ ಚಿಕಿತ್ಸೆ ಕೊಡಿಸಲು ವಿಫಲವಾಗುತ್ತದೆ. ಸುಲಭವಾಗಿ ಮಾಟಗಾರನ ಮಾತಿಗೆ ಸಿಕ್ಕಿ ತಂಗಿ ಶಾಶ್ವತವಾಗಿ ಕೊರಗುವಂತಾಗುತ್ತದೆ.

ಶಮನ: ಕಾದಂಬರಿ ಸಮಾಜದಲ್ಲಿ ಕೂಡಾ ಇದರ ಚಿತ್ರಣವಿದೆ. "ಹಳ್ಳಿ ಜನ ಮೂಢನಂಬಿಕೆಗೆ ಮಾರುಹೋಗ್ತಿದ್ದಾರೆ, ಇವರು ಕೊಳ್ಳಿದೆವ್ವ ದೆವ್ವ ಮುಂತಾದವುಗಳನ್ನು ನಂಬುತ್ತಾರೆ. ನೀವೆಲ್ಲರೂ 19 ನೇ ಶತಮಾನದಲ್ಲಿದ್ದೀರಿ" (ಪು. 45) ಕೊಳ್ಳಿದೆವ್ವದ ಬಗ್ಗೆ ಜನರಲ್ಲಿ ಅವಿತಿರುವ ಮೂಢನಂಬಿಕೆಗಳನ್ನು ಹೋಗಲಾಡಿಸುವ ಚಿತ್ರಣ ಕಾಣಬಹುದಾಗಿದೆ.

ಕಾದಂಬರಿ ಸಿಂಧೂರದಲ್ಲಿ ಊರಗೌಡ ಗ್ರಾಮದಲ್ಲಿ ಬಸವಿ ಬಿಡುವ ಪದ್ಧತಿಯನ್ನು ಜಾರಿಗೆ ತರುವ ಚಿತ್ರಣವಿದೆ. ಬಡ ಕೃಷಿಕನ ಮಗಳಾದ ಚಿನ್ನಿ ಮೇಲೆ ಕಣ್ಣು ಹಾಕುವ ಊರಗೌಡ ಆಕೆಯನ್ನು ಬಸವಿ ಬಿಡಬೇಕು ಇಲ್ಲದಿದ್ದರೆ ದೇವಿ ಕೋಪಿಸಿಕೊಳ್ಳುತ್ತಾಳೆಂದು ಜನರಲ್ಲಿ ಅವ್ಯಕ್ತ ಭಾವ ಉಂಟು ಮಾಡುತ್ತಾನೆ. ತನ್ನ ಕಾರ್ಯ ಸಾಧನೆಗಳಿಗೆ ಬಡಹಳ್ಳಿಗರಲ್ಲಿ ಮೌಢ್ಯತೆಯನ್ನು ಬಿತ್ತುವ ಮೇಲ್ವರ್ಗದ ಸ್ವಾರ್ಥ ಬಿಂಬಿತವಾಗಿದೆ.

ಕಾದಂಬರಿ ಅವ್ಯಕ್ತದಾಚೆಯಿಂದದಲ್ಲಿ ಬಡವರು ತಮ್ಮಲ್ಲಿನ ಆರ್ಥಿಕ ದುಃಸ್ಥಿತಿ ಅರಿಯದೆ ಮಕ್ಕಳಿಗೆ ಮಾನಸಿಕ ಚಿಕಿತ್ಸೆಯನ್ನು ಕೊಡಿಸದೆ ಕಾಡುವ ಅವ್ಯಕ್ತ ಭಯವನ್ನು ಚಿತ್ರಿಸಲಾಗಿದೆ. "ಬ್ಯಾರೆ ದೆವ್ವಗಳಂಗೆ ಹಗಲೆಲ್ಲ ಮೈ ಮ್ಯಾಲ್ ಇರ್ತಿರ್ಲಿಲ್ಲ, ಅದನ್ನ ಹಿಡಿಯಾದಾರ ಹೆಂಗೆ? ನಾವು ಮನಸ್ರು ನಮ್‌ಗಿಂತ ಸಕ್ತಿ ಅವಕ್ಕಿರ್ತೈತಿ, ಅದ್ರ ಸೊಲ್ಲಡಗ್‌ಸಾದರೆ ಹಿಂಗೆ? ನಮ್ ನೆರವಾಗೋದು ಸ್ಯಾಮೋರೆ" (ಪು. 25) ಎಂದು ಗ್ರಾಮದ ಜನರಲ್ಲಿನ ಮೂಢನಂಬಿಕೆ ಮಠದ ಸ್ವಾಮಿಯೇ ದೇವರೆಂಬ ಚಿತ್ರಣವನ್ನು ಕಾಣಬಹುದಾಗಿದೆ.

ಅಕ್ಕ ಕಾದಂಬರಿಯಲ್ಲಿ ಗ್ರಾಮದ ಜನರಲ್ಲಿದ್ದ ನಾಟಿಔಷಧ, ಮನೆಮದ್ದು ನೀಡುವ ಮೂಢನಂಬಿಕೆಗಳನ್ನು ಪರಿಕಲ್ಪನೆ ಕಾಣಬಹುದಾಗಿದೆ. ಸ್ವತಃ ವೈದ್ಯೆಯಾದ ಊರಿನ ಅಕ್ಕಳೆನಿಸುವ ರಕ್ಷಾ ಶ್ವೇತವಸ್ತ್ರಧಾರಿಯಾಗಿ ಇಡೀ ಊರಿನಲ್ಲಿನ ಕೊಳೆ ತೆಗೆಯುವ ಚಿತ್ರಣವಿದೆ. ಗ್ರಾಮದ ಜನರು ಪೂಜಾರಪ್ಪ ಮೈಮೇಲೆ ಬರುವ ದೇವರ ಮಾತನ್ನು ನಂಬಿ ಹೆಣ್ಣು ಮಕ್ಕಳನ್ನು ದೇವ್ರಸೇವೆ ಹೆಸರಿನಲ್ಲಿ ದೌರ್ಜನ್ಯಕ್ಕೆ ತಳ್ಳುವ ಚಿತ್ರಣವನ್ನು ಕಾಣಬಹುದಾಗಿದೆ. ಇದಕ್ಕೆ ಬಲಿಯಾಗುವವರಲ್ಲಿ ಬಹುಪಾಲು ಜನರು ಬಡಕೃಷಿಕರೇ ಆಗಿರುತ್ತಾರೆ. ಬಡತನದ ಅಶಕ್ತತೆ ಬಂಡವಾಳವಾಗಿದೆ.

ವಿಜಯಶ್ರೀಯವರ ಹಲವಾರು ಕಾದಂಬರಿಗಳಲ್ಲಿ ಬಡತನ ಹಾಗೂ ಮೂಢನಂಬಿಕೆಗಳು ಒಂದಕ್ಕೊಂದು ಪೂರಕವಾಗಿ ಬಿಂಬಿಸಿವೆ. ಬಹುಪಾಲು ಕಾದಂಬರಿಗಳು ಸಮಾಜದಲ್ಲಿನ ಪಿಡುಗುಗಳ ಬಗ್ಗೆ ವೈಜ್ಞಾನಿಕ ಚಿಂತನೆ ಅಗತ್ಯವೆಂಬ ಅರಿವನ್ನೂ ಮೂಡಿಸಿರುವುದನ್ನು ಕಾಣಬಹುದಾಗಿದೆ. ಸಮಕಾಲೀನ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡು ಕಾದಂಬರಿಗಳನ್ನು ರಚಿಸಲಾಗಿದೆ.

**ವೇಶ್ಯಾ ಸಮಸ್ಯೆ ಮತ್ತು ಅತ್ಯಾಚಾರ:**

ವೇಶ್ಯಾಸಮಸ್ಯೆ ಸಮಾಜಕ್ಕಂಟಿದ ಪಿಡುಗು. ಈ ಸಮಸ್ಯೆ ಎಷ್ಟು ಪ್ರಾಚೀನವೋ ಅಷ್ಟೇ ಕರಾಳವಾದುದಾಗಿದೆ. ಸಮಸ್ಯೆಯ ಸುಳಿಯಲ್ಲಿ ಸಿಲುಕುವ ಹೆಣ್ಣು ಮಕ್ಕಳಲ್ಲಿ ಇದು ಅನಿವಾರ್ಯವಾಗಿ ಬಂದೊದಗುವ ದುಸ್ಥಿತಿ. ದುರುಳರ ಕೈಗೆ ಸಿಕ್ಕಿ ಈ ಪಾಪಕೂಪಕ್ಕೆ ಸೇರುವವರು ಮತ್ತಷ್ಟು ಜನ, ಸ್ವೇಚ್ಛಾ ಬದುಕಿಗಾಗಿ, ಶೋಕಿಗಾಗಿ, ಪ್ರವೃತ್ತಿಯಾಗಿಸಿಕೊಳ್ಳುವವರು ಮತ್ತೆ ಕೆಲವರು. ಭಾರತವು ವಿಶ್ವದಲ್ಲೇ ಅತೀ ದೊಡ್ಡ ವೇಶ್ಯಾಜಾಲವನ್ನು ಹೊಂದಿದೆ. ಮಾನವ ಹಕ್ಕು ಆಯೋಗದ ಸರ್ವೆಯ ಪ್ರಕಾರ ಭಾರತದಲ್ಲಿ ಇಪ್ಪತ್ತು ಮಿಲಿಯನ್‌ಗಿಂತ ಹೆಚ್ಚು ವೇಶ್ಯೆಯರಿದ್ದಾರೆ. ಇದರಲ್ಲಿ ಸುಮಾರು 35% ವೇಶ್ಯೆಯರು 18ಕ್ಕಿಂತ ಕಡಿಮೆ ವಯಸ್ಸಿನವರು ಹಾಗೂ ಮುಂಬೈ ನಗರವೊಂದರಲ್ಲೇ 2 ಲಕ್ಷದಷ್ಟು ವೇಶ್ಯೆಯರನ್ನು ಕಾಣಬಹುದು ಎಂದು ಸರ್ವೆ ತಿಳಿಸುತ್ತದೆ. ಡಾ. ಗಿಲಾಡೀಸ್ ಪೇಪರ್ ಆನ್ 'ಪರ್ಸ್ಪೆಕ್ಟಿವ್ ಎಂಡ್ ಪೋಸಿಶಿನಲ್ ಪ್ರಾಬ್ಲಮ್ಸ್ ಆಫ್ ಸೋಶಿಯಲ್ ಇಂಟರ್‌ವೆನ್ಷನ್' ಸರ್ವೆ ಪ್ರಕಾರ 70% ಮಹಿಳೆಯರು ಬಲವಂತವಾಗಿ ವೇಶ್ಯೆಯಾಗಿ ತಳ್ಳಲ್ಪಟ್ಟಿದ್ದಾರೆ. ಅಲಹಾಬಾದ್‌ನ ಮೀರಗಟ್ ಅತ್ಯಂತ ಅಪಾಯಕಾರಿ ವೇಶ್ಯಾವೃತ್ತಿ ನಡೆಯುವ ಸ್ಥಳವೆಂದು ಹೇಳಲಾಗುತ್ತದೆ.

ವೇಶ್ಯಾ ಸಮಸ್ಯೆಯನ್ನು ಕುರಿತಾಗಿ ವಿಜಯಶ್ರೀಯವರು ರಚಿಸಿರುವ ಕಪ್ಪು ಮನಸಿನ ಬಿಳಿ ಜನರು ಕಾದಂಬರಿ ಅತ್ಯಂತ ಪ್ರಭಾವಿಯುತ ಚಿತ್ರಣವನ್ನು ಹೊಂದಿದೆ. ಭವಾನಿ ಎಂಬ ಪಾತ್ರದ ಸುತ್ತಲೂ ಕಾದಂಬರಿ ಸುತ್ತುತ್ತದೆ. ಸ್ವತಃ ಲೇಖಕಿ ಕಾದಂಬರಿಯ ಬಗ್ಗೆ "ಕಾದಂಬರಿ ರಚನೆಗಾಗಿ ಖುದ್ದು ಬಾಂಬೆಯ ರೆಡ್‌ಲೈಟ್ ಏರಿಯಾಕ್ಕೆ ತೆರಳಿರುವುದಾಗಿ ತಿಳಿಸುತ್ತಾರೆ. ನೈಜ ಸನ್ನಿವೇಶಗಳನ್ನು ಕಾದಂಬರಿಯಲ್ಲಿ ಕಟ್ಟಿಕೊಡುವ ಹಿನ್ನೆಲೆಯಲ್ಲಿ ಲೇಖಕಿ ಈ ಶ್ರಮ ಸಾರ್ಥಕವೆನಿಸುತ್ತದೆ. ಇಡೀ ಕಾದಂಬರಿ ಹೆಣ್ಣಿನ ಮೇಲಾಗುತ್ತಿರುವ ದೌರ್ಜನ್ಯ, ಅಸಹಾಯಕ ಪರಿಸ್ಥಿತಿಯನ್ನು ವಿವರಿಸುತ್ತದೆ.

"ಆ ಬೀದಿಗಳಲ್ಲಿ ಓಡಾಡುವಾಗ ಎದೆ ಝಲ್ಲೆಂದಿತು. ಮನಸ್ಸು ತಳಮಳಗೊಂಡ ರೀತಿಯನ್ನು ಹಿಡಿದಿಡಲು ನನ್ನ ಲೇಖನಿಗೂ ಸಾಧ್ಯವಿಲ್ಲ. ರಾತ್ರಿ ಬಂದ ಸ್ವಲ್ಪ ಹೊತ್ತಿನ ನಿದ್ರೆಯಲ್ಲೂ, ರಸ್ತೆ ಮೇಲೆ ನಿಂತು ಹಾವಭಾವ, ಭಂಗಿಗಳಲ್ಲಿ ಗಿರಾಕಿಗಳನ್ನು ಆಕರ್ಷಿಸುತ್ತಾ, ಬಲವಂತದ ನಗೆ ಬೀರುತ್ತಿರುವ ಅರೆನಗ್ನ ಹೆಣ್ಣುಗಳು ನನ್ನ ಸುತ್ತ ಕುಣಿದಂತೆ ಕೈ ಬೀಸಿ ಜಗತ್ತಿನ ಎಲ್ಲ ಜೀವಿಗಳನ್ನೂ ಆಹ್ವಾನಿಸಿದಂತೆ ಕನಸು ಕಂಡು

ಬೆಚ್ಚಿದೆ. ಸುಮಾರು ಮೂವ್ವತ್ತು ವರ್ಷದ ಸುಂದರ ಹೆಣ್ಣು ಮಗಳೊಬ್ಬರು ನನ್ನಬಳಿ ಬಂದರು – ತಮ್ಮ ಬದುಕಿನ ದುರಂತವನ್ನೆಲ್ಲ ನನ್ನೆದುರು ಬಿಚ್ಚಿದರು. ಕೇಳುತ್ತ ಕೇಳುತ್ತ ನಾನು ತಣ್ಣಗಾಗಿ ಹೋಗಿದ್ದೆ. ತಾಯಿ (ಚಿಕ್ಕಮ್ಮ ), ತಂದೆ, ಗಂಡ, ಮೈದುನ ಎಲ್ಲರೂ ತಮ್ಮ ಬದುಕಿನ ಲಾಲಸೆಗಾಗಿ ಆ ಹೆಣ್ಣನ್ನು ಈ ಪಾಪಕೂಪಕ್ಕೆ ತಳ್ಳಿದ್ದರು. ಈಕೆಯ ಜೀವಂತ ಗೋರಿಯ ಮೇಲೆ, ತಮ್ಮ ಸುಂದರ ಮನೆಗಳನ್ನು ಕಟ್ಟಿಕೊಂಡರು" (ಪುಟ 112) ಎಂದು ಲೇಖಕಿ ನುಡಿದಿರುವ ಅಂಶಗಳು ಸಮಾಜದ ಘೋರ ಮುಖವನ್ನು, ಕತೆಯನ್ನು, ಜೀವನದ ವಿವಿಧ ಮಜಲುಗಳಲ್ಲಿ ಹೆಣ್ಣಿನ ಅಸಹಾಯಕತೆಯನ್ನು ಪರಿಚಯಿಸುತ್ತದೆ.

ಸ್ವಾತಿ ಕಾದಂಬರಿಯಲ್ಲಿ ಅತ್ಯಾಚಾರಕ್ಕೊಳಗಾಗುವ ಸನ್ನಿವೇಶವನ್ನು ಕಟ್ಟಿಕೊಡುತ್ತಾರೆ. ಕಾಲೇಜಿನಲ್ಲಿ ಉಪನ್ಯಾಸಕನಾದ ಪ್ರದೀಪ್ ಹಾಗೂ ಹಂಸಳು ವಿವಾಹವಾಗುವ ತೀರ್ಮಾನ ಮಾಡಿರುತ್ತಾರೆ. ಇದಕ್ಕೆ ಕುಟುಂಬದ ಒಪ್ಪಿಗೆಯೂ ಇರುತ್ತದೆ. ಆದರೆ ಕಾಲೇಜಿನಲ್ಲಿನ ಪುಂಡರ ಗುಂಪು ಹೆಣ್ಣು ಮಕ್ಕಳಿಗೆ ಕಿರುಕುಳ ನೀಡುವುದು, ರ್ಯಾಗ್ ಮಾಡುವುದನ್ನೇ ರೂಢಿಮಾಡಿಕೊಂಡಿರುತ್ತದೆ. ಇದಕ್ಕೆ ತಂದೆ ತಾಯಿಯರ ನಿರ್ಲಕ್ಷ್ಯ, ಹಣ ಆಸ್ತಿ ಮದ ಕಾರಣವಾಗಿರುತ್ತದೆ. ಇಲ್ಲಿ ಚಂದ್ರಕಾಂತ ಶ್ರೀಮಂತ ಮನೆತನದ ಹುಡುಗ. ಕುಡಿತ, ಗಾಂಜಾ, ಅಫೀಮು ಜೊತೆಗೆ ಬೇಕಾದ ಹುಡುಗಿಯರನ್ನು ಹಣದಿಂದ ಬೇಕಾದಂತೆ ಖರೀದಿಸುತ್ತಿದ್ದ ವ್ಯಕ್ತಿತ್ವ ಹೊಂದಿದವನು. ಇವರ ಈ ಗುಂಪಿಗೆ ಹಂಸಳನ್ನು ಚುಡಾಯಿಸುವುದು, ರೇಗಿಸುವುದು ಒಂದು ಅಸ್ತ್ರವಾಗಿತ್ತು. ಒಮ್ಮೆ "ಪ್ರದೀಪ್ ನಿನಗೆ ಏನು ಕೊಟ್ಟಾನು? ಅವನೊಬ್ಬ ಬಡ ಉಪಾಧ್ಯಾಯ, ನಾವು ನಿಮಗೆಬೇಕಾದ್ದು ಕೊಡ್ತೇವೆ, ರಾಣಿ ಹಾಗೆ ಮೆರೆಸ್ತೇವೆ, ಬಾ ನಮ್ಮ ಜೊತೆ ..." (ಪುಟ 112) ಎಂದು ಅಸಭ್ಯ ವರ್ತನೆ ತೋರುತ್ತಾರೆ. ಆಗ ಕೆರಳಿದ ಹಂಸ ಆತನಿಗೆ ಬಯ್ದು ತನ್ನ ಚಪ್ಪಲಿಯನ್ನು ಬೀಸುತ್ತಾಳೆ. ಇದು ಚಂದ್ರಕಾಂತನ ದಳ್ಳುರಿಗೆ ಕಾರಣವಾಗುತ್ತದೆ. ತನ್ನ ತಪ್ಪನ್ನು ಅರಿಯದೆ ಆಕೆ ಮೇಲೆ ಸೇಡನ್ನು ತೀರಿಸಿಕೊಳ್ಳಲು ಹಪಹಪಿಸುತ್ತಾನೆ. ಆಕೆಯನ್ನು ಒಂಟಿಯಾಗಿ ಸಿಗುವಂತೆ ಮಾಡಿ ಅತ್ಯಾಚಾರವೆಸಗುತ್ತಾನೆ. ಆ ಸನ್ನಿವೇಶವನ್ನು ವಿವರಿಸಿದ ರೀತಿ ನೋಡಿದಾಗ ಇಂದಿಗೂ ಸಮಾಜದಲ್ಲಿ ನಿರ್ಭಯಾ ಪ್ರಕರಣಗಳು ನೆನಪಾಗಿಸಿ ಹೃದಯವಂತರಲ್ಲಿ ಅಳುಕು ಮೂಡಿಸುತ್ತದೆ. ಹೆಣ್ಣನ್ನು ಭೋಗದ ವಸ್ತುವನ್ನಾಗಿಸಿಕೊಂಡ ಸಮಾಜದ ಮೇಲ್ತರಗದ ಪುರುಷರ ದಬ್ಬಾಳಿಕೆಯನ್ನು ಈ ಕಾದಂಬರಿಯಲ್ಲಿ ನೋಡಬಹುದಾಗಿದೆ.

ಸ್ನೇಹಪಂಜರ ಕಾದಂಬರಿಯಲ್ಲಿ ಹೆಣ್ಣಿನ ಮೇಲೆ ಅತ್ಯಾಚಾರ ಎಸಗುವ ದುರುಳ ಚಿತ್ರಣವನ್ನು ಕಾಣಬಹುದಾಗಿದೆ. ಸಮಾಜ ಸೇವಕನಂತೆ ಸಮಾಜದ ಹೊರಗೆ ಮುಖವಾಡ ಹೊತ್ತ ಶಿವರಾಜ್ ಬೆಳಿಗ್ಗೆ ಹೆಣ್ಣು ಮಕ್ಕಳ ಅನಾಥಾಶ್ರಮ ನಡೆಸುತ್ತಾ ರಾತ್ರಿವೇಳೆ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಎಸಗುವ ಚಿತ್ರಣವನ್ನು

ಕಾಣಬಹುದಾಗಿದೆ. "ಅವಳು ಕೂಗದಂತೆ ಬಾಯಿಗೆ ಬಟ್ಟೆ ಒತ್ತಿ ಹಿಡಿದಿದ್ದರು, ದಾಂಡಿಗರು ಹುಡುಗಿಯನ್ನು ಎಳೆದುಕೊಂಡರು, ಕತ್ತಲಲ್ಲಿ ಕಾರು ಮರೆಯಾಯಿತು" (ಸ್ನೇಹಪಂಜರ, ಪುಟ 170). ಇಲ್ಲಿ ಹೆಣ್ಣುಮಕ್ಕಳನ್ನು ಬಲಾತ್ಕಾರ ಮಾಡುತ್ತಾ ಸಮಾಜದಲ್ಲಿ ಗಣ್ಯವ್ಯಕ್ತಿಯಾಗಿ ಮುಖವಾಡ ಧರಿಸಿರುವ ವ್ಯಕ್ತಿಗಳ ಬಗ್ಗೆ ಕಾದಂಬರಿ ಕೇಂದ್ರಿತವಾಗಿದೆ. ಗಂಡಿನ ಆಸೆ, ಆಕಾಂಕ್ಷೆಗಳಿಗೆ ಮಿತಿಯೇ ಇಲ್ಲದ ರೀತಿಯಲ್ಲಿ ಈ ಕಾದಂಬರಿ ಪ್ರಸ್ತುತ ಸಮಾಜದ ಕರಾಳ ಮುಖವನ್ನು ಎಳೆಎಳೆಯಾಗಿ ತೆರೆದಿಡುತ್ತದೆ.

ಕೀರ್ತಿಮಯೂರಿ ಕಾದಂಬರಿಯಲ್ಲಿ ಆಸ್ತಿಗಾಗಿ ಅತ್ಯಾಚಾರಕ್ಕೊಳಗಾಗುವ ಸನ್ನಿವೇಶವನ್ನು ಇಲ್ಲಿ ಕಾಣಬಹುದಾಗಿದೆ. "ಮಯೂರಿ ತನ್ನ ಬಳಿ ಬರುತ್ತಿದ್ದ ವ್ಯಕ್ತಿಯಿಂದ ಪಾರಾಗಲು ಕೋಣೆ ತುಂಬ ಓಡಿದಳು. ದಯವಿಟ್ಟು ನನ್ನ ಬಿಟ್‌ಬಿಡಿ" ಎಂದು ಅಂಗಲಾಚತೊಡಗಿದಳು. (ಕೀರ್ತಿಮಯೂರಿ, ಪುಟ 335) ದುರುಳರ ಕ್ರೌರ್ಯಕ್ಕೆ ಬಲಿಯಾಗುವ ಮಯೂರಿ ಪಡುವ ಮಾನಸಿಕ ಆಘಾತ, ದೈಹಿಕ ಹಿಂಸೆಯನ್ನು ದುಷ್ಟರ ಭೀಭತ್ಸತನವನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ.

"ಹಾಸಿಗೆ ಮೇಲೆ ಹೆಣದಂತೆ ಅಂಗಾತವಾಗಿ ಅವಳ ದೇಹ ಬಿದ್ದಿತ್ತು. ಕಂದುಬಣ್ಣದ ವಸ್ತ್ರ ಹರಿದು ಛಿದ್ರವಾಗಿತ್ತು. ಮುಖ ಮೈ ತುಂಬ ಹಲ್ಲಿನಿಂದ ಕಚ್ಚಿದ ಗಾಯಗಳು, ತುಟಿ ಕೆನ್ನೆಗಳು ಊದಿಕೊಂಡು ರಕ್ತ ಒಸರುತ್ತಿತ್ತು" (ಪುಟ. 339) ಹೀಗೆ ಅತ್ಯಾಚಾರಕ್ಕೊಳಗಾದ ಮಯೂರಿಯ ದುಃಸ್ಥಿತಿಯ ದೃಶ್ಯವನ್ನು ವಿವರಿಸಲಾಗಿದೆ. ಯಾವ ಹೆಣ್ಣಿಗೂ ಇಂತಹ ದುರ್ಗತಿ ಬರಬಾರದೆಂಬ ಯೋಚನೆಯನ್ನು ಹುಟ್ಟುಹಾಕುತ್ತದೆ. ಇಲ್ಲಿ ಮಯೂರಿ ಶ್ರೀಮಂತಿಕೆಯ ಫಲವಾಗಿ ದುರುಳರ ಪಾಲಿಗೆ ಸಿಕ್ಕು ನರಳುವ ಚಿತ್ರಣವಿದೆ. ಅಂತ್ಯದಲ್ಲಿ ಆತ್ಮವಿಶ್ವಾಸವನ್ನು ಪಡೆದುಕೊಂಡು ಜೀವನದ ಹಳಿಗೆ ಮರಳುವ ಮಯೂರಿ ನೊಂದ ಹೆಣ್ಣು ಮಕ್ಕಳಲ್ಲಿ ಧೈರ್ಯ ತುಂಬುವ ಪಾತ್ರವಾಗಿ ಕಾಣಸಿಗುತ್ತದೆ. ಗಂಡು ಒಂಟಿ ಹೆಣ್ಣಿನ ಮೇಲೆ ತನ್ನ ಹಿಡಿತ ಸಾಧಿಸಲು ಹಾಗು ಕಾಮದಾಸೆಯನ್ನು ಈಡೇರಿಸಿಕೊಳ್ಳಲು ಮಾಡುವ ಘೋರ ಅಪರಾಧದ ಚಿತ್ರಣವನ್ನು ಕಾದಂಬರಿ ಕಣ್ಣಮುಂದೆ ವಿಕೃತ ಮನುಷ್ಯನ ಕಥಾನಕವನ್ನು ಕಟ್ಟಿಕೊಡುತ್ತದೆ.

ವಾತ್ಸಲ್ಯದ ಹಾದಿಗಳು ಕಾದಂಬರಿಯಲ್ಲಿ ಪತಿ ತೀರಿಕೊಂಡ ಸಾವಿತ್ರಿ ಮೇಲೆ ಕಣ್ಣಿಡುವ ಭಾವ ರಂಗಣ್ಣನ ಪಾತ್ರ ಹೆಣ್ಣಿಗೆ ಮನೆಯೂ ಸುರಕ್ಷಿತವಲ್ಲ ಎಂಬ ಭಾವ ಮೂಡಿಸುತ್ತದೆ. ಕೊನೆಗೆ ಸಾವಿತ್ರಿ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವ ಚಿತ್ರಣವನ್ನು ಕಾಣಬಹುದಾಗಿದೆ. ಧಿಕ್ಕರಿಸಲಾಗದ, ಸಮಸ್ಯೆಯನ್ನು ಎದುರಿಸಲಾಗದ ಸಾವಿತ್ರಿ ಮನೆಯಲ್ಲಿಯ ಅಸುರಕ್ಷತೆ ಭಾವನೆಗೆ, ಗಂಡನಿಲ್ಲದ ತನ್ನ ಭವಿಷ್ಯದ ಬಗ್ಗೆ ಹೆದರಿ ಆತ್ಮಹತ್ಯೆಗೆ ಶರಣಾಗುತ್ತಾಳೆ. ಇಂದು ಸಮಾಜದಲ್ಲಿ ಹಲವಾರು ಹೆಣ್ಣು ಮಕ್ಕಳು ಅತ್ಯಾಚಾರಕ್ಕೆ ಒಳಗಾದಾಗ ಮಾನ ಮರ್ಯಾದೆಗೆ ಅಂಜಿ ಸಾವಿಗೆ ಶರಣಾಗುವ ಪಾತ್ರವಾಗಿ ಸಾವಿತ್ರಿ ಕಾಣುತ್ತಾಳೆ. ರಕ್ಷಕರೇ ಭಕ್ಷಕರಾದಾಗ ಇನ್ನಾರಿಗೆ ದೂರು ನೀಡಲು

ಸಾಧ್ಯವಿಲ್ಲ ಎಂಬುದನ್ನು ಅರಿಯಲು ಈ ಕಾದಂಬರಿ ಸಹಕಾರಿಯಾಗಿದೆ.

ಸಿಂಧೂರ ಕಾದಂಬರಿಯಲ್ಲಿ ನಿಮ್ನ ವರ್ಗದ ಹೆಣ್ಣು ಮಕ್ಕಳನ್ನು ತನ್ನ ಕಾಮದಾಸೆಗೆ ಬಲಿ ತೆಗೆದುಕೊಳ್ಳುವ ಊರಗೌಡನ ಚಿತ್ರಣವಿದೆ. ಮನೆಯ ಹೆಣ್ಣು ಮಕ್ಕಳನ್ನು ಮನೆಯಿಂದ ಹೊರಗಡೆ ಬರಬಾರದು ಎಂದು ಆಲೋಚಿಸುವ ಊರಗೌಡ ಗಂಡ ಸತ್ತು ವಿಧವೆಯಾದ ಹೆಣ್ಣುಮಕ್ಕಳ ಮೇಲೆ ಬಲಾತ್ಕಾರ ಎಸಗುವ, ತನ್ನ ಹೊಲಕ್ಕೆ ಕೂಲಿಗಾಗಿ ಬರುವ ಹೆಂಗಸರನ್ನು ತನ್ನ ಕಾಮದಾಸೆಗೆ ಬಳಸಿಕೊಳ್ಳುವ ಚಿತ್ರಣವಿದೆ.

ಸ್ವಾರ್ಥ ತುಂಬಿದ ಪುರುಷ ಪ್ರಧಾನ ವ್ಯವಸ್ಥೆ ತನ್ನ ಚಪಲಚಿತ್ತ ಮನೋಭಾವಕ್ಕೆ 'ಕಾಮಾತುರಾಣಾಂ ನ ಭಯಂ ನ ಲಜ್ಜಾ' ಎಂಬಂತೆ ಸ್ವೇಚ್ಛಾಚಾರ ತೋರಬಲ್ಲನು. ಇದಕ್ಕೆ ಬಲಿಯಾಗುವ ನಿಮ್ನ ವರ್ಗದ ಹೆಣ್ಣಿನ ಮೂಕರೋದನೆಯನ್ನು ಹಲವು ಕಾದಂಬರಿಗಳಲ್ಲಿ ಕಾಣಬಹುದಾಗಿದೆ.

**ಬಾಲ್ಯವಿವಾಹ ಮತ್ತು ವಿಧವಾ ವಿವಾಹ ಪರಿಕಲ್ಪನೆಗಳು:**

ಬಾಲ್ಯವಿವಾಹ, ವಿಧವಾ ವಿವಾಹ ಪರಿಕಲ್ಪನೆಗಳನ್ನು ತಮ್ಮ ಕಾದಂಬರಿಗಳಲ್ಲಿರಿಸಿಕೊಂಡು ಹಲವಾರು ಲೇಖಕಿಯರು ಸಮಾಜದ ಗಮನಸೆಳೆದಿದ್ದಾರೆ. ಎಂ.ಕೆ. ಇಂದಿರಾ ಫಣಿಯಮ್ಮ, ತ್ರಿವೇಣಿಯವರ ದೂರದ ಬೆಟ್ಟ, ಸೋತುಗೆದ್ದವಳು ಕಾದಂಬರಿಗಳು ಅತ್ಯಂತ ಜನಪ್ರಿಯ ಕಾದಂಬರಿಗಳೆನಿಸಿದ್ದಲ್ಲದೆ ಜನರಲ್ಲಿ ವೈಚಾರಿಕ ಚಿಂತನೆಯನ್ನು ಕೂಡಾ ಬೆಳೆಸಿದವು.

ಈ ರೀತಿಯ ಸಾಮಾಜಿಕ ಸಮಸ್ಯೆಯನ್ನು ಕುರಿತು ವಿಜಯಶ್ರೀಯವರ ಕಾದಂಬರಿಗಳಲ್ಲಿ ಬಿಂಬಿತವಾಗಿರುವ ಪರಿಕಲ್ಪನೆಗಳು ಅತ್ಯಂತ ನೈಜತೆಯಿಂದ ಮೂಡಿದೆ. ಚಿನ್ನಮ್ಮ ಕುಂಟೆಬಿಲ್ಲೆ ಆಡುತ್ತ ಕಾಲಕಳೆಯುತ್ತಿದ್ದ ಬಾಲೆ. ಅವಳನ್ನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದ ಶಂಕರನೊಂದಿಗೆ ವಿವಾಹ ಮಾಡುವ ಚಿತ್ರಣವನ್ನು ಸುಮಂಗಲೆ ಕಾದಂಬರಿಯಲ್ಲಿ ಕಾಣಸಿಗುತ್ತದೆ. ಆಡುವ ವಯಸ್ಸಿನ ಮಕ್ಕಳಿಗೆ ವಿವಾಹ ಬಂಧನದಲ್ಲಿ ಬಂಧಿಸುವ ಚಿತ್ರಣವನ್ನು ಕಾಣಬಹುದಾಗಿದೆ. ಅಡುಗೆ ಏನೇನ್ ಕಲ್ತಿದೀ ಎಂಬ ಪ್ರಶ್ನೆ ಬಂದಾಗ ನಾನು ಬೆಪ್ಪಾಗಿ ಅಜ್ಜಿಯ ಕಡೆ ನೋಡಿದೆ. ಹೋಗ್ಲಿ ಬಿಡಿ ಮುಂದೆ ಕಲ್ತ್ಕೋತಾಳೆ, ಹಾಡು, ಹಸೆ, ರಂಗೋಲಿ ಏನಾರ್ ಕಲ್ತಿದಾಳಾ" (ಸುಮಂಗಲೆ, ಪುಟ 291) ಎಂದು ಬಾಲ್ಯದ ಹೊಂಗನಸಿನ ಚಿನ್ನಮ್ಮಳ ವಧುಪರೀಕ್ಷೆಯ ಸನ್ನಿವೇಶವನ್ನು ಸುಮಂಗಲೆಯಲ್ಲಿ ಕಾಣಬಹುದಾಗಿದೆ. ಮದುವೆ ಎಂಬುದು ಮಕ್ಕಳಾಟವಲ್ಲ ಎಂಬ ಮಾತಿದೆ. ಸಣ್ಣವಯಸ್ಸಿಗೆ ಮದುವೆ ಮಾಡಿ ಹೆಣ್ಣು ಹೆತ್ತವರು ಜವಾಬ್ದಾರಿಯಿಂದ ಕೈ ತೊಳೆದುಕೊಂಡೆವು ಎಂಬ ಮನೋಭಾವವಿರುವುದನ್ನು ಕಾಣಬಹುದಾಗಿದೆ.

ಇಲ್ಲಿ ಮದುವೆಯ ಪರಿಕಲ್ಪನೆಯೇ ಇಲ್ಲದ ಚಿನ್ನ (ಚಿನ್ನಮ್ಮ) ಶಂಕರ ಆಟ ಆಡಲು ಸಿಗ್ತಾನೆ ಎಂಬ ಖುಷಿಯಲ್ಲಿರುತ್ತದೆ. ಅವ್ಯಕ್ತ ಭಯ, ಏನೋ ಸಂತೋಷ,

ಎರಡೂ ಭಾವ ಚಿನ್ನಳಲ್ಲಿ ಕಂಡರೆ ಪೋಷಕರಿಗೆ ಮಗಳ ಮದ್ವೆ ಮಾಡಿ ಮುಗಿಸಿದ ಸಂತೃಪ್ತಿ ಕಾಣಬಹುದಾಗಿದೆ. ಮುಂದೆ ಜ್ವರದ ಕಾರಣ, ಮರಣ ಹೊಂದುವ ಶಂಕರ ಚಿನ್ನವ್ವ ಏನೊಂದು ಸೌಭಾಗ್ಯ ಪಡೆಯದೆ ವಿಧವೆ ಪಟ್ಟಕ್ಕೆ ತಳ್ಳುತ್ತಾಳೆ. "ಗಂಡನಿಲ್ಲದ ಹೆಂಡತಿಯ ಬಾಳು ಬೀದಿನಾಯಿ ಬಾಳಾಗುತ್ತಲ್ಲವೇ? ಅದರಲ್ಲೂ ರೂಪ, ಯೌವನ ಇರುವ ನನ್ನ ಗತಿ" (ಸುಮಂಗಲೆ, ಪುಟ129) ಎಂದು ಭವಿಷ್ಯ ನೆನೆದು ಭಯಬೀಳುತ್ತಾಳೆ. ಪತಿಯ ಅಣ್ಣ (ಭಾವನ) ಕಾಮುಕ ದೃಷ್ಟಿಯಿಂದ ಪಾರಾಗಲು ದಾರಿ ಕಾಣದೆ ಕೊರಗತೊಡಗುವ ವಿಧವೆ ಚಿನ್ನಮ್ಮಳ ಸ್ವಗತ ಮಾತು. "ಮದುವೆದಿನ ಚಿರಸುಮಂಗಲೆ ಭಾಗ್ಯ ನೀಡೆಂದು ಮಂಗಳಗೌರಿಯನ್ನು ಪೂಜಿಸಿದ್ದು ವ್ಯರ್ಥವಾಯ್ತಲ್ಲ. ಮಂಗಳದ ಬದಲು ಅಮಂಗಳವೇ ನನ್ನ ಜೀವನವನ್ನು ತುಂಬಿದೆ. ಅಯ್ಯೋ ತಾಯಿ ಇದೇನು ಭಾಗ್ಯ ನೀಡಿದೆ? (ಸುಮಂಗಲೆ, ಪುಟ 136) ಎಂದು ಚಿನ್ನಮ್ಮ ತನ್ನ ದುರ್ವಿಧಿ ನೆನೆದು ಅಳುವ ಸನ್ನಿವೇಶದ ಚಿತ್ರಣವನ್ನು ಕಾದಂಬರಿಯಲ್ಲಿ ನೈಜವಾಗಿ ಬಿಂಬಿತವಾಗಿರುವುದನ್ನು ಕಾಣಬಹುದಾಗಿದೆ.

ಚೈತ್ರದ ಚಿಗುರು ಮತ್ತೊಂದು ಸಾಮಾಜಿಕ ಸಮಸ್ಯೆ ಕುರಿತಾದ ಕಾದಂಬರಿಯಾಗಿದ್ದು, ಸಾಮಾಜಿಕ ಪ್ರಜ್ಞೆ ಹೊಂದಿದ ಸಿನಿಮಾವಾಗಿ ಜನಮನ್ನಣೆಯನ್ನು ಪಡೆದುಕೊಂಡ ಕಾದಂಬರಿಯಾಗಿದೆ. ವೈಧವ್ಯದ ಮನೋಸಂಕಟಗಳು, ವಿಧವಾ ವಿವಾಹವನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಲು ಹಿಂದೇಟು ಹಾಕುವ ಅಂಶಗಳನ್ನು ಚೈತ್ರದ ಚಿಗುರು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಹೆಂಡತಿ ತೀರಿಹೋದ ವರುಷಕ್ಕೆ ಚಪ್ಪರ ಹಾಕಿಸುವ ಸಂಪ್ರದಾಯದ ಸಮಾಜದಲ್ಲಿ ವಿಧವೆಯ ಜೀವನ, ಆಕೆಯ ಮರುವಿವಾಹ, ಒಪ್ಪಿತವಾಗಿಸಿಕೊಳ್ಳುವ ವಿಶಾಲ ಹೃದಯದ ಕೊರತೆಯ ಬಗ್ಗೆ ಚಿಂತಿಸುವಂತೆ ಮಾಡುತ್ತದೆ. ಶಿಲ್ಪ ಸತ್ಯವಾನನ ಮಡದಿ ಹತ್ತೊಂಬತ್ತು ಇಪ್ಪತ್ತರ ಹರೆಯದಲ್ಲೇ ವಿವಾಹ, ವೈಧವ್ಯವನ್ನು ಕಂಡ ಪಾತ್ರ. ಸತ್ಯವಾನನ ಆಕಸ್ಮಿಕ ಸಾವು ಶಿಲ್ಪಳನ್ನು ಅಧೀರರನ್ನಾಗಿಸುತ್ತದೆ. ತನ್ನ ಮುಂದೆ ಹಾಸಿ ಮಲಗಿರುವ ಬಲು ದೂರದ ಪ್ರಯಾಣವನ್ನು ಒಬ್ಬಂಟಿಯಾಗಿ ಸಹಿಸಬೇಕಾದ ದಾರಿ ನೆನೆದು ಪ್ರತಿದಿನ ಕಣ್ಣೀರಿಡುವ ಪಾತ್ರವಾಗಿ ಶಿಲ್ಪ ಕಾಣುತ್ತಾಳೆ. ರಾತ್ರಿ ಹೊತ್ತಿನ ಊಟ ತ್ಯಜಿಸಿ, ದಿಂಬಿನಲ್ಲೇ ಕಣ್ಣೀರು ಗರೆಯುತ್ತಾ ನೋವು ನಿಟ್ಟುಸಿರಿನ ಶಿಲ್ಪಳ ವೈಧವ್ಯದ ಸಂಕಟವನ್ನು ಕಾದಂಬರಿಯಲ್ಲಿ ನೈಜವಾಗಿ ಬಿಂಬಿಸಲಾಗಿದೆ.

ಬಾಲ್ಯವಿವಾಹ ಮತ್ತು ಘೋರ ವೈಧವ್ಯ ಬದುಕಿನ ಚಿತ್ರಣ ಕಟ್ಟಿಕೊಡುವ ಮತ್ತೊಂದು ಕಾದಂಬರಿ ವನಸುಮ. ಗೌರಿ ಕುಂಟೆಬಿಲ್ಲೆ ಆಡುವ ವಯಸ್ಸಿನಲ್ಲಿ ಸೋದರ ಮಾವ ಬಸವರಾಜನೊಂದಿಗೆ ವಿವಾಹವಾಗುತ್ತಾಳೆ. ಇಲ್ಲಿ ಶ್ರೀಮಂತ ತಾತನ ಮನೆಗೆ ಯಜಮಾನಿಯಾಗಿ ಕಾಲಿಡುವ ಗೌರಿಗೆ ಬಸವರಾಜನೊಂದಿಗೆ ಪತಿಯೆಂಬುದಕ್ಕಿಂತ ಸ್ನೇಹಿತನೆಂಬ ಸಲುಗೆಯೇ ಹೆಚ್ಚು. ಮಲೆನಾಡಿನಲ್ಲಿ ಯಥೇಚ್ಛವಾಗಿ ಸಿಗುವ ಸೀಬೆ

ಮೊದಲಾದ ಹಣ್ಣುಗಳನ್ನು ತಿನ್ನುತ್ತಾ ಮರದಿಂದ ಮರಕ್ಕೆ ಏರುವ ಆಟವಾಡುತ್ತಾ, ಮಾರುದ್ದ ಜಡೆ ತುಂಬಾ ಹೂ ಮುಡಿದು ಸದಾ ಸಂಭ್ರಮ ಸಡಗರದಿಂದ ಆಟವಾಡಿಕೊಂಡಿದ್ದ. ಹುಡುಗಾಟದ ಹುಡುಗಿ ಗೌರಿಗೆ ಗಂಡ ಬಸವರಾಜನ ಅಕಾಲಿಕ ಮರಣ ಆಘಾತವನ್ನುಂಟು ಮಾಡುತ್ತದೆ. ಸದಾ ಚಿಗುರೆ ಮರಿಯಂತೆ ಲವಲವಿಕೆಯಿಂದ, ಆಡುತ್ತಾ ಕುಣಿಯುತ್ತಾ ಸ್ನೇಹಿತರೊಡನೆ ಬೆರೆತು ಹೋಗಿದ್ದ ಗೌರಿಗೆ ವೈಧವ್ಯದ ಪಟ್ಟ ಕ್ರಮೇಣ ವೈರಾಗ್ಯದ ದಿಕ್ಕಿನತ್ತ ಸಾಗುವಂತೆ ಮಾಡುತ್ತದೆ. ಮನೆತುಂಬ ಮಕ್ಕಳನ್ನಳೆದು ಮನೆ ಬೆಳಗಬೇಕೆಂಬ ಆಸೆಹೊತ್ತ ಗೌರಿಗೆ ಓದಿನಲ್ಲೂ ಆಸಕ್ತಿ. ಆದರೆ ಅಂದಿನ ಸಾಮಾಜಿಕ ಕಟ್ಟುಪಾಡು, ಗೊಡ್ಡು ಸಂಪ್ರದಾಯ ಗೌರಿ ಹೆಣ್ಣು ಎಂಬ ಕಾರಣಕ್ಕೆ ಓದಬೇಕೆಂಬ ಅವಳ ಆಸೆಗೆ ಅಡ್ಡಿಪಡಿಸುತ್ತದೆ. ಮಾವ ಲಿಂಗಣ್ಣನ ಸಾವು ಕೂಡ ಗೌರಿಗೆ ಬದುಕಿನಲ್ಲಿ ಮತ್ತಷ್ಟು ಜವಾಬ್ದಾರಿಯನ್ನು ಹೇರುತ್ತದೆ. ಗೌರಿ ಈರಮ್ಮನ ಮಕ್ಕಳು ಹಾಗೂ ಮನೆಯ ದತ್ತುಪುತ್ರ ವೀರೇಶರಿಗೆ ಮದುವೆ ಮಾಡಿ, ಅವರ ಮಕ್ಕಳ ಸಖ್ಯದಲ್ಲಿ ಕಾಲ ದೂಕುತ್ತಾಳೆ. ಮದುವೆ, ಬಸಿರು, ಬಾಣಂತನದ ಸಂಭ್ರಮಗಳು ಗೌರಿಯ ಮನದ ಮೂಲೆಯಲ್ಲಿ ಕುಳಿತಿದ್ದ ಹೆಣ್ತನದ ಸಹಜ ಆಸೆಗಳನ್ನು ಆಗಾಗ ಕೆಣಕುವ ಸಂದರ್ಭಗಳು ಒದಗಿ ಬಂದರೂ ಗೌರಿಯ ಸ್ಥಿತಮನ ಅಚಲವಾದ ನಿರ್ಧಾರ ಕೈಗೊಂಡು ಅದಕ್ಕೆ ಶರಣಾಗಿರುವಂತೆ ನಮಗೆ ಭಾಸವಾಗುತ್ತದೆ.

ಸುಮಂಗಲಿ ಕಾದಂಬರಿ 1983ರಲ್ಲಿ ರಚಿತಗೊಂಡ ಕೃತಿ. ಆ ಕಾಲಕ್ಕೆ ವಿಧವಾ ವಿವಾಹ ಅತ್ಯಂತ ವಿವಾದಿತ ವಿಚಾರವೇ. ಒಬ್ಬ ವಿಧವೆಯನ್ನು ಹಿಂದುಳಿದ ಕಾಲದಲ್ಲಿ ಮರು ವಿವಾಹವಾಗುವುದು ಸುಲಭದ ಪರಿಕಲ್ಪನೆ ಆಗಿರಲಿಲ್ಲ. ಚೆನ್ನಮ್ಮ ಶಂಕರ ಮಡದಿ, ಊರ ಗೌಡನ ಬಲಾತ್ಕಾರಕ್ಕೆ ಒಳಗಾಗಿ ಮೂಕವೇದನೆ ಅನುಭವಿಸುತ್ತಿದ್ದಾಗ ಆಕೆಗೆ ತನ್ನ ಮಡದಿಯ ಸ್ಥಾನ ನೀಡಿ ಕಡೆತನಕ ಕೈ ಹಿಡಿಯುವ ವ್ಯಕ್ತಿತ್ವ ಉಳ್ಳವನು. ನೊಂದ ಮನಕೆ ನೋವಾಗ ಬಾರದೆಂದು ಹಂಗಿಸುವವರ ಗೂಡಾದ ತನ್ನ ಮನೆತೊರೆದು ದೂರದ ಊರಿನಲ್ಲಿ ಹೊಸ ಜೀವನ ಪ್ರಾರಂಭಿಸಿ ನಂಬಿದ ಹೆಣ್ಣಿಗೆ ಆರ್ಥಿಕ ಸುಭದ್ರತೆ, ಸಮಾನ ಜೀವನ, ಸಾಮಾಜಿಕ ಸ್ಥಾನಮಾನ ಎಲ್ಲವನ್ನೂ ನೀಡಿ ಗೌರವ ಮೂಡಿಸುವಂತಹ ಪಾತ್ರ. ಚೆನ್ನಮ್ಮ ತಾನಾಗಿಯೆ ಬಯಸುವವರೆಗೂ ಆಕೆಯ ಮೇಲೆ ಅಂತರವನ್ನು ಕಾಯ್ದುಕೊಂಡ ಮಾನವೀಯ ವ್ಯಕ್ತಿಯಾಗಿ ಬಸಪ್ಪ ಕಾಣುತ್ತಾನೆ. 1983ರ ಕಾಲಘಟ್ಟದಲ್ಲಿ ಇಂತಹ ಪರಿಕಲ್ಪನೆಗಳು ಸಮಾಜದ ಚಿಂತನೆಯಲ್ಲಿ ಧನಾತ್ಮಕ ಬದಲಾವಣೆ ತರಲು ಪೂರಕವಾಯಿತು ಎಂದರೆ ಉತ್ಪ್ರೇಕ್ಷೆಯಾಗಲಾರದು.

**ಉಪಸಂಹಾರ:**

ಮಾನವ ಸಮಾಜ ಜೀವಿಯಾಗುತ್ತಿದ್ದಂತೆಯೇ ಜಾತಿ, ಧರ್ಮಗಳ ಗೋಡೆಯನ್ನು ಕಟ್ಟಿಕೊಂಡ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಕರ್ಮಾಧಾರಿತ ಪಂಗಡಗಳು ನೂರಾರು ರೂಪಗಳನ್ನು ಪಡೆದುಕೊಂಡಿತು.

**"ಮಾನವ ದೇಹದ**
**ಸೃಷ್ಟಿ ರಚನೆಯಲಿ**
**ನಿಸರ್ಗ ಮೂಲಗಳಲಿ**
**ಇಲ್ಲದಿದ್ದರೂ ಜಾತಿಗೆ ಜಾಗ**
**...**
**ಹುಟ್ಟು ಸಾವಿಗಿಲ್ಲದ**
**ಕಷ್ಟ ಸುಖಗಳಿಗಿಲ್ಲದ**
**ಪ್ರೀತಿ ಸ್ನೇಹಕ್ಕಿಲ್ಲದ**
**ಜಾತಿಯಾಗಿದೆ ಇಂದು**
**ಶಾಂತಿ ಕೊಲ್ಲುವ ಖಡ್ಗ"**

**(ಹೊ.ರಾ. ಪರಮೇಶ ಹೊಡೇನೂರು : ಕನ್ನಡ ಕವನ ಕಣಜ)**

ಎಂಬ ಸಾಲುಗಳು ಇಂದು ಜಾತಿ ವ್ಯವಸ್ಥೆ, ನಿಮ್ನ-ಮೇಲ್ವರ್ಗದ ಕಲ್ಪನೆ ಸಾಗುತ್ತಿರುವ ದಿಕ್ಕನ್ನು ತೋರಿಸುತ್ತದೆ. ಜಾತಿ ವಿಜಾತಿ ಎನಬೇಡ ಎಂಬ ಸರ್ವಜ್ಞನ ಮಾತಿಗೂ ಮೀರಿದ ಮಾನವನ ಸಂಕುಚಿತತೆ ಮಾನವ ಸಮಾಜಕ್ಕಂಟಿದ ಶಾಪವೇ ಸರಿ. ಜಾತಿ, ನಿಮ್ನ ಮೇಲ್ವರ್ಗದ ಪರಿಕಲ್ಪನೆ ಇತ್ತೀಚಿನ ದಿನಗಳಲ್ಲಿ ಹಣ, ಆಸ್ತಿ, ಅಂತಸ್ತುಗಳನ್ನು ಆಧರಿಸಿ ಬದಲಾಗುತ್ತಿರುವ ಮನೋಭಾವ ಕಾಣಬಹುದಾಗಿದೆ. ಮೇಲ್ಜಾತಿ ಮತ್ತು ಕೆಳಜಾತಿ ಎಂಬ ಸಂಕುಚಿತತೆ ಮೀರಿ ಉಳ್ಳವ-ಇಲ್ಲದವ ಎಂಬ ಹಣಕಾಸು ಆಧಾರಿತ ವರ್ಗ ಮಹತ್ವ ಪಡೆಯುತ್ತದೆ. 'So called Educated' ಎನ್ನುವವರ ಮನೋಭಾವವನ್ನು ಕಾಣುತ್ತೇವೆ. ಬದಲಾಗುತ್ತಿರುವ ಕಾಲಘಟ್ಟದಲ್ಲಿ ಉಳ್ಳವರು ಇಲ್ಲದವರನ್ನು ಶೋಷಿಸುವ ಸ್ವರೂಪ ಪಡೆಯುತ್ತಿದೆ. ಜೀವವಿಕಾಸದಲ್ಲಿ 'ಅಶಕ್ತರೇ ಬಲಿಯಾಗುವವರು' ಎಂಬ ಡಾರ್ವಿನ್‌ನ ಥಿಯರಿ ಸಮಾಜದಲ್ಲಿ ವ್ಯವಸ್ಥೆಗೂ ಅನ್ವಯವಾಗುವಂತಿದೆ. ವಿಜಯಶ್ರೀಯವರ ಹಲವು ಕಾದಂಬರಿಗಳಲ್ಲಿ ಬಾಲ್ಯವಿವಾಹ, ವಿಧವಾ ವಿವಾಹಗಳ ಕುರಿತಾದ ಪರಿಕಲ್ಪನೆಗಳನ್ನು ಕಾಣಬಹುದಾಗಿದೆ. ಇಲ್ಲಿ ಮೂಡಿದ ಪಾತ್ರಗಳು ಬಾಲ್ಯವಿವಾಹದ ಕರಾಳ ಕೈಗೆ ಸಿಕ್ಕು ಜೀವಂತ ಶವವಾಗುವ ಪಾತ್ರಗಳು. ಹಾಗೆಯೇ ಸಂಪ್ರದಾಯದ ಕಪಿಮುಷ್ಠಿಯಿಂದ ಹೊರಬಂದು ಆದರ್ಶ ಆತ್ಮವಿಶ್ವಾಸದಿಂದ ಬಾಳುವ ಸ್ತ್ರೀಪಾತ್ರಗಳೆರಡರ ಚಿತ್ರಣವನ್ನು ಕಾಣಬಹುದಾಗಿದೆ. ಸಾಂಪ್ರದಾಯಿಕತೆ ಮತ್ತು ಪ್ರಗತಿಪರ ಚಿಂತನೆ ಎರಡನ್ನೂ ಸಮತೋಲನವಾಗಿರಿಸಿ ಲೇಖಕಿಯ ಕಾದಂಬರಿಗಳು ಕಾಣಸಿಗುತ್ತದೆ.

**ಪರಾಮರ್ಶನ ಗ್ರಂಥಗಳು:**

1. ವಿಜಯಶ್ರೀ, (2006), ಅಕ್ಕ, ಹೆಚ್.ಎಸ್.ಮಂಜುನಾಥ ಪ್ರಕಾಶನ, ಶಿವಮೊಗ್ಗ.
2. ವಿಜಯಶ್ರೀ, (2010), ಅವ್ಯಕ್ತದಾಚೆಯಿಂದ, ರತ್ನ ಪ್ರಕಾಶನ, ಶಿವಮೊಗ್ಗ.
3. ವಿಜಯಶ್ರೀ, (2011), ಕಪ್ಪುಮನಸ್ಸಿನಬಿಳಿಜನ, ರುದ್ರಮ್ಮ ಪ್ರಕಾಶನ, ರಾಮಗೊಂಡನಹಳ್ಳಿ.
4. ವಿಜಯಶ್ರೀ, (1980), ಕೀರ್ತಿಮಯೂರಿವನ, ಶ್ರೀ ಏಜೆನ್ಸೀಸ್, ಬೆಂಗಳೂರು.
5. ವಿಜಯಶ್ರೀ, (2006), ವಾತ್ಸಲ್ಯದಹಾದಿಗಳು, ಹೆಚ್.ಎಸ್.ನಾಗರತ್ನ ಪ್ರಕಾಶನ, ಶಿವಮೊಗ್ಗ.
6. ವಿಜಯಶ್ರೀ, (2006), ಶಮನ, ಹೆಚ್.ಎಸ್.ನಾಗರತ್ನ ಪ್ರಕಾಶನ, ಶಿವಮೊಗ್ಗ.
7. ವಿಜಯಶ್ರೀ, (2009), ಸ್ವಾತಿ, ಪರ್ಣಿಮಾ ಪ್ರಿಂರ್ಸ್, ಬೆಂಗಳೂರು.
8. ವಿಜಯಶ್ರೀ, (2003), ಸಿಂಧೂರ, ರಜತ ಪ್ರಕಾಶನ, ಭದ್ರವತಿ.
9. ವಿಜಯಶ್ರೀ, (1993), ಸುಮಂಗಲಿ, ಭಾರತಿ ಪ್ರಕಾಶನ, ಮೈಸೂರು.
10. ವಿಜಯಶ್ರೀ, (2007), ಸ್ನೇಹಪಂಜರ, ಹೆಚ್.ಎಸ್.ನಾಗರತ್ನ ಪ್ರಕಾಶನ, ಶಿವಮೊಗ್ಗ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.